(SRI A. P. APPANNA)

	ASSETS	*1966-67*	*1967-68*
V	**Advances**	Rs.	Rs.
	M.M.T.C. of India Ltd.	7,333.00	7,33 .00
	Advance to contractors, Mine Managers etc.	5,02,736.77	4,41,863.61
	Prepaid port plot rent	11,988.75	——
	Lease hold property	50,000.00	57,041.81
	Advances to Railway	10,659.20	10,659.20
	Advances to Electricity Board	20,477.50	20,477.50
	Deposits for lands and buildings	1,75,050.95	1,27,552.82
	Interest on provident fund investment receivable	3,275.00	3,275.00
	Road Tax receivable	91,154.64	2,15,388.66
	Despatch money due	...	13,371.14
	Cash on hand	71,101.97	397.37
	Total ...	2,97,11,047.32	2,41,78,346.70

Application of Rule 40 of the Rules of Procedure

† ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಸ್ವಾಮಿ, ಇವೊತ್ತಿನ ಪ್ರಶ್ನೋತ್ತರ ಪಟ್ಟಿಯಲ್ಲಿರತಕ್ಕ ಪ್ರಶ್ನೆಯ ಕ್ರಮಸಂಖ್ಯೆ 102ರ ಬಗ್ಗೆ ನಾನೊಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ನನ್ನ ಕ್ರಿಯಾಲೋಪ ಇಷ್ಟೆ. ಈ ಪ್ರಶ್ನೆಯ (ಬ)ಗೆ ಕೊಟ್ಟಿರತಕ್ಕ ಉತ್ತರದಲ್ಲಿ 1966-67 ಮತ್ತು 1967-68ನೇ ಸಾಲುಗಳಲ್ಲಿ ತುಕ್ಕುಹಿಡಿಯದ ಉಕ್ಕನ್ನು ಗೊತ್ತುಮಾಡಿ ಕೊಡಲಾದ ಯೂನಿಟ್ಟುಗಳ ಪಟ್ಟಿಯನ್ನು ಮುಂದೆ ಓದಗಿಸುತ್ತೇವೆಂದು ಹೇಳಿದ್ದಾರೆ. ಮಾನ್ಯ ಸದಸ್ಯರು ಅದೇ ಪ್ರಶ್ನೆಯನ್ನು ಪುನಃ ಕಳುಹಿಸಿದರೆ ಅದನ್ನು ಅಡ್ಮಿಟ್ ಮಾಡುತ್ತೇವೆಂದು ತಾವು ಅಪ್ಪಣೆ ಕೊಡಿಸಿದ್ದೀರಿ. ರೂಲ್ಸ್ ಆಫ್ ಪ್ರೊಸೀಜರ್ 40ರ ಪ್ರಕಾರ ಪ್ರಶ್ನೆಯನ್ನು ಕಳುಹಿಸಿದ 15 ದಿವಸಗಳಲ್ಲಿ ಅದಕ್ಕೆ ಸರ್ಕಾರ ಉತ್ತರವನ್ನು ಕೊಡಲೇಬೇಕು. ತಾವು ಸಭಾಧ್ಯಕ್ಷರಾದಮೇಲೆ ಪ್ರಶ್ನೆಗಳಿಗೆ ಉತ್ತರವನ್ನು ಕೊಡತಕ್ಕ ಕಾಲದಲ್ಲಿ ಒಂದು ಹೊಸ ಪದ್ಧತಿಯನ್ನು ಅನುಸರಿಸುತ್ತಿದ್ದೀರಿ. ಅದೇನೆಂದರೆ ಈ ಸಭೆಯು ಮುಕ್ತಾಯವಾಗುವ ವೇಳೆಗೆ ಯಾವುದಾದರೂ ಪ್ರಶ್ನೆಗಳು ಉಳಿದು ಕೊಂಡಿದ್ದರೆ ಅವುಗಳಿಗೆ ಉತ್ತರವನ್ನು ಆಯಾ ಮಾನ್ಯ ಸದಸ್ಯರ ಮನೆಗಳಿಗೆ ಕಳುಹಿಸುತ್ತಿದ್ದೀರಿ. ಮನೆಗೆ ಕಳಿಸಿದಂತಹ ಪ್ರಶ್ನೆಗಳು ಮುಕ್ತಾಯವಾಯಿತು ಎಂದು ಅರ್ಥವಾಗುತ್ತದೆ. ಪುನಃ ಅದೇ ಪ್ರಶ್ನೆಗಳನ್ನು ನಾವು ಕಳಿಸಿದರೆ ಅಡ್ಮಿಟ್ ಮಾಡಿಕೊಳ್ಳುತ್ತೇವೆಂದು ತಾವು ಹೇಳಬಹುದು. ಆದರೆ ತಾವು ಈಗ ಅನುಸರಿಸುತ್ತಿರುವ ಕ್ರಮವನ್ನು ನೋಡಿದರೆ ನಾವು ಮೊದಲು ಕೊಟ್ಟ ಪ್ರಶ್ನೆಯನ್ನೇ ಪುನಃ ತಮಗೆ ಕಳುಹಿಸಿದರೆ, ಆ ಪ್ರಶ್ನೆಗೆ ಉತ್ತರ ಈ ಸಭೆಯಲ್ಲಿ ಬರದೆ ಪುನಃ ಮನೆಗೆ ವಾಪಸ್ ಬರುತ್ತದೆ. ಈ ರೀತಿ ಎರಡು ಸಲ ಆಗಿದೆ. ಅದಕ್ಕಾಗಿ ನಾನು ಕಡಾಖಂಡಿತವಾಗಿ ಇಲ್ಲಿ ಹೇಳಬೇಕಾಯಿತು. ಈ ಸ್ಪೇನ್‌ಲೆಸ್ ಸ್ಟೀಲ್ ಹಂಚುವುದರಲ್ಲಿ ಸ್ವಜನಪಕ್ಷಪಾತ ನಡೆಯುತ್ತಿದೆ ಎಂಬುದು ಹಾದಿಬೀದಿಯ ಮಾತಾಗಿದೆ. ಅದಕ್ಕೋಸ್ಕರ ನಾನು ಇಲ್ಲಿ ಮಾತನಾಡಬೇಕಾಗಿದೆ. ಯಾರು ಯಾರಿಗೆ ಹಂಚುತ್ತಿದ್ದಾರೆ ಎಂಬುದು ನಮಗೆ ಅರ್ಥವಾಗುತ್ತಿಲ್ಲ.

(*Sri K. H. Patil rose*)

MR. SPEAKER.—Let not the hon. Member Sri Nanje Gowda yield ; let him finish his point of order first.

Sri S. BANGARAPPA (Sorab).—So far as yielding is concerned, it is the right of a member to yield or not to yield.

Mr. SPEAKER.—When a Member addresses the House, he may yield with the permission of the Chair. But when a point of order is raised, there is no provision or scope for yielding at all.

Sri K. H. PATIL (Hubli).—When I am making a legitimate request to the hon. Member Sri Nanje Gowda through the Chair to yield for a minute, the Chair is coming in the way. This is really too much and cannot be tolerated.

ಶ್ರೀ ಎಚ್. ಎನ್. ನಂಜೇಗೌಡ.—ಇಲ್ಲಿಯವರೆಗೂ ಒಂದು ಪದ್ಧತಿ ನಡೆದುಕೊಂಡು ಬಂದಿತ್ತು. ಕ್ರಿಯಾರೋಪದ ಬಗ್ಗೆ ನಾವುಗಳು ಮಾತನಾಡುವಾಗ ಎಷ್ಟೋ ಸಲ ಮಾನ್ಯ ಮಂತ್ರಿಗಳಾದ ಶ್ರೀ ಪುಟ್ಟಸ್ವಾಮಿಯವರು ಮಧ್ಯಪ್ರವೇಶ ಮಾಡಿದ್ದಾರೆ. ಆಗ ಅವರಿಗೆ ಅವಕಾಶ ಕೊಟ್ಟಿದ್ದೀರಿ. ತಾವು ಮಂತ್ರಿಗಳಿಗೆ ರಕ್ಷಣೆ ಕೊಟ್ಟಂತೆ ನಮಗೂ ಸಹ ಕೊಡಬೇಕು.

ಅಧ್ಯಕ್ಷರು.—ತಾವು ಜಾಗ್ರತೆ ಹೇಳಿ ಮುಗಿಸಿ.

ಶ್ರೀ ಎಚ್. ಎನ್. ನಂಜೇಗೌಡ.—ರೂಲ್ 40ರ ಬಗ್ಗೆ ತಮ್ಮ ಗಮನವನ್ನು ಸೆಳೆಯುತ್ತಿದ್ದೇನೆ. ಅದರಲ್ಲಿ ಈ ರೀತಿ ಹೇಳಿದೆ :

> "The Government shall send a reply to a question for oral answer within fifteen days from the date of its receipt by the Government."

ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಅಜೀಜ್‌ಸೇಟ್ (ನರಸಿಂಹರಾಜ).—ತಾವು ಅಂದರೆ ಯಾರು ಅರ್ಥ ಮಾಡಿಕೊಳ್ಳಬೇಕು ?

ಶ್ರೀ ಎಚ್. ಎನ್. ನಂಜೇಗೌಡ.—ತಾವು ಅಂದರೆ ಅಧ್ಯಕ್ಷರು, ಮಾನ್ಯ ಸದಸ್ಯರುಗಳು ಮಾನ್ಯ ಮಂತ್ರಿಗಳು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು. ಈ ಸ್ಟೇನ್‌ಲೆಸ್ ಸ್ಟೀಲ್ ವಿಚಾರದಲ್ಲಿ ಬಡ್ಜೆಟ್ ಅಧಿವೇಶನದಲ್ಲಿ ಮತ್ತು ಅನೇಕ ಬಾರಿ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಹಿಂದಿನ ವರದಿಯನ್ನು ಸಹ ಈ ರೀತಿ ಮಾನ್ಯ ಸದಸ್ಯರುಗಳು ಹೇಳಿರುವುದನ್ನು ತಂದು ತಮಗೆ ತೋರಿಸುವುದಕ್ಕೆ ನಾನು ತಯಾರು ಇದ್ದೇನೆ. ಇಷ್ಟೊಂದು ಸಲ ಪ್ರಸ್ತಾಪ ಮಾಡಿದ್ದರೂ ಕೂಡ ಸರ್ಕಾರದವರು ಉತ್ತರ ಕೊಡುವ ಸೌಜನ್ಯವನ್ನು ಇದುವರೆಗೆ ತೋರಿಸಿಲ್ಲ. ಉಡಾಫೆ ಉತ್ತರವನ್ನು ಕೊಡುತ್ತಿದ್ದಾರೆ. ನಾನು ಎರಡು ಉದ್ದೇಶ ಇಟ್ಟುಕೊಂಡು ಪ್ರಶ್ನೆಗಳನ್ನು ಕಳಿಸುತ್ತೇನೆ. ಒಂದು ಉದ್ದೇಶ ನಮಗೆ ಗೊತ್ತಿಲ್ಲದೇ ಇರತಕ್ಕ ಒಂದು ವಿಚಾರವನ್ನು ಗೊತ್ತು ಮಾಡಿ ಕೊಳ್ಳುವುದು, ಎರಡನೇ ಉದ್ದೇಶ, ಸರಕಾರದವರು ಒಂದು ರೀತಿಯಾದ ಉಡಾಫೆ ಉತ್ತರಗಳನ್ನು ಕೊಡುತ್ತಿದ್ದಾರೆ ಎಂದು ನಾವು ಇರ್ಲೆ ಪದೇ ಪದೇ ಹೇಳುತ್ತಲೇ ಬರುತ್ತಿದ್ದೇವೆ. ಇಂತಹ ಪ್ರಸಂಗಗಳು ಹಿಂದೆ ಕೂಡ ಬಂದಿದ್ದವು. ಸ್ಟೇನ್‌ಲೆಸ್ ಸ್ಟೀಲ್ ಕೋಚ್‌ಗಳ ಬಗ್ಗೆ ಇದರಲ್ಲಿ ನಡೆದಿರುವ ವ್ಯವಹಾರಗಳನ್ನು ನೋಡಿದರೆ ನಮಗೆ ಅನೇಕ ಶಂಕೆಗಳು ಬರುತ್ತಿವೆ ಮತ್ತು ಇದರಲ್ಲಿ ಅನೇಕ ದುರ್ವ್ಯವಹಾರಗಳು ನಮ್ಮ ಗಮನಕ್ಕೆ ಬಂದಿರುವುದರಿಂದ ಇದರ ಬಗ್ಗೆ ಸರಕಾರದವರಿಂದ ವಿವರಗಳನ್ನು ಕೊಡಬೇಕೆಂದು ಇಲ್ಲಿ ಕೇಳುತ್ತಿದ್ದೇವೆ. ಆದರೆ ತಾವು ಇಲ್ಲಿ ನಮ್ಮ ಅರಿಕೆಯನ್ನು ಮನ್ನಿಸಿ ಉತ್ತರಗಳನ್ನು ತರಿಸಿಕೊಡುತ್ತೇವೆ ಎಂದು ಹೇಳಿದರೆ ಸರಕಾರ ಈ ಅಧಿವೇಶನವಾದ ಮೇಲೆ ಉತ್ತರಗಳನ್ನು ನಮ್ಮ ಮನೆ ಬಾಗಿಲಿಗೆ ಕಳುಹಿಸುವಂತಾದರೆ ಆಗ ನಾವೇನೂ ಹೇಳುವುದಕ್ಕೂ ಆಗುವುದಿಲ್ಲ. ಇಂಥ ಉತ್ತರಗಳಿಗೆ ನಾವು ಉಪಪ್ರಶ್ನೆಗಳನ್ನು ಕೇಳುವುದಕ್ಕೂ ಅವಕಾಶ ಸಿಗುವುದಿಲ್ಲ. ಇದಕ್ಕಾಗಿ ಇದರ ಉತ್ತರಗಳನ್ನು ಈ ಅಧಿವೇಶನ ಮುಗಿಯುವುದರೊಳಗಾಗಿಯೇ ತರಿಸಿಕೊಡಬೇಕು. ಸರಕಾರ ಪ್ರಶ್ನೆಗಳಿಗೆ ಉತ್ತರಗಳನ್ನು ಕಡ್ಡಾಯವಾಗಿ ಕಳುಹಿಸಿಕೊಡಬೇಕೆಂದು ರೂಲ್ಸ್‌ನಲ್ಲೂ ಇದೆ. ಇದರಲ್ಲೇ 'ಷಲ್ ಸೆಂಡ್ ಎ ರಿಪ್ಲೈ' ಎಂದು ಇರುವುದರಿಂದ ಸರಕಾರ ಉತ್ತರವನ್ನು ಒದರಿಸಿಕೊಡಲೇಬೇಕು ಎಂದು ನಾನು ಇದು ತಂದಿರುವ ಪಾಯಿಂಟ್ ಸ್ಟಾಮಿ

Sri AZEEZ SAIT.—The elaborate argument of Sri Nanje Gowda is only to get justice from the Chair while giving the ruling. We know what the ruling of the Chair will be. We want the Chair to uphold the dignity of the House by giving a proper ruling.

Mr. SPEAKER.—I have heard hon. Members Sri Nanje Gowda and Sri Azeez Sait. As Speaker, I am the representative of the entire House. I do not belong either to the Government or to the Opposition. I have been acting and shall continue to act as impartially as God ordains me (*Interruptions*). Such interjections are inconsistent with the dignity and decorum of the House.

Sri H. N. NANJE GOWDA.—May I know whether it would be in order for the Chair to invoke the name of God ?

Mr. SPEAKER.—I do not think everybody will be satisfied by my ruling. I shall give the ruling to the best of my capacity.

The point raised by the hon. Member Sri Nanje Gowda is that the provisions of Rule 40 are not followed and that the Chair should give certain directions. Rule 40 says that the Government shall send a reply to a question for oral answer within fifteen days from the date of its receipt by the Government. It is imperative and Government is bound to give reply. If, however, the Government feels that the period of 15 days is not sufficient for them, it is open to them to make a request and the time may be extended by another 15 days. So, at the most within 30 days the Government is bound to give a reply. Now, it is the experience here as well as in Lok Sabha that within the specified time the Government should give replies to the extent information is available and they cannot withhold any information which is within their knowledge till the date of answering the question on the floor of the House. But in spite of the best efforts, if the information is not available, then it cannot be said that the provisions of Rule 40 are violated. If the information is not complete and to the extent it is incomplete, it is open to the hon. Members to put another question and that question would be admitted by the Chair without any hesitation. That is the constitutional position. This, I have already stated and I am stating it again for the information of Hon. Members who required further elucidation. Supposing in spite of the best and *bona fide* efforts, a particular answer is not available, then, no amount of pressure would help in getting the answer. The Government have got to give the correct answer ; it should not be a sort of conjecture and it should not be incomplete. Therefore, it requires an intensive effort, and in spite of best efforts if the Government is not able to get the answer, they cannot be blamed. In such cases the members have got a right to put another question and that would be admitted. it is possible that the Government might get the information before the close of the Session. Therefore, there is no Point of Order and I am sorry I cannot accept it.

(*Sriyuths H. M. Channabasappa and K. H. Patil rose.*)

Mr. SPEAKER.—What does Sri Patil want to say ?

Sri H. M. CHANNABASAPPA (Periyapatna).—Sir, is there any order in calling upon members to speak? If a person gets up early, naturally we expect that you first give him the opportunity to speak.

Mr. SPEAKER.—If many members stand up simultaneously, it becomes difficult. The choice has to be made by the Speaker as to whom to call and whom not to call. I will try my best to call those, members who are likely to further the purpose for which the deliberations are being held.

Sri K. H. PATIL.—The Chair has kindly given a Ruling that the Government has to give replies within 15 days and if extension of time is given, within 30 days, I would like to know whether the Speaker, being the custodian of this House, is not behind the camera to use his discretion. The Government and the Opposition should be considered on par and rules are mandatory both for the Government as well as the Opposition. As per rules, when the Government is not in a position to give the information, they will have to seek the permission of the Chair and the Chair has to be satisfied whether the reasons given are correct. If the Chair is satisfied about the reasons, then extension of time should be granted. I want to know whether this procedure has been followed. The questions sent by me and my learned friend Sri H. Siddaveerappa are rolling for months together and we have to renew the questions Session after Session. I want to know the steps taken by the Speaker in this behalf. These are days of reaching the moon. But, we are unable to get replies in time. We know, most of the officers are without work. The Speaker will have to be very strict.

Mr. SPEAKER.—The Point of Order should be brief.

Sri K. H. PATIL.—Sir, my Point of Order is that the Speaker has no right to allow the Government time beyond 30 days according to Ruel 40, and that 30 days time can be availed of only when, after 15 days, they convince the Chair with their statement of facts for extension of time.

Sri H. N. NANJE GOWDA.—The Speeker, under the Rules, is having power to suspend any rule, but has no authority or power to misinterpret the rules. I would like to invite your attention to the second proviso of Rule 40, which says :—

> "Provided further that where a reply to a question is delayed beyond the aforesaid fifteen days the Government shall communicate to the Speaker the reasons for the delay and request that the question may be taken up for answer on a subsequent date not later than thirty days from the date of its receipt by the Government."

Now, the power open for the Speaker, was either to hold over the question or ask the Government to furnish the information today. The Speaker must direct the Government to furnish the information before the close of this Session. That was my Point of Order, but, I am sorry you have not touched it.

Mr. SPEAKER.—Sri K. H. Patil raised the point that the Presiding Officer should not extend the time unless there is a specific request. I can tell the Hon. Members that the provisions as well as the proviso to Rule 40 are followed by me very strictly.

2-30 P.M.

ಶ್ರೀ ಅಜೀಜ್‌ಸೇಟ್.—ಹೇಳುವುದಕ್ಕೆ ಮೊದಲು ಅರ್ಥಮಾಡಿಕೊಂಡು ಹೇಳುವುದು ಒಳ್ಳೆಯದು, ಈಗ ಪ್ರಜಾಪ್ರಭುತ್ವದ ಕೊಲೆಯಾಗುತ್ತಿದೆ.

Mr. SPEAKER.—Is there no discipline in this House? When a ruling is being given by the Chair, the Hon. Member cannot rise and speak.

I was telling the Hon. Members that provisions of rule 40 of the rules of procedure are very strictly followed and the Government has been directed to furnish replies within a fortnight. But when the Government pleads its inabllity to furnish the reply in time, the time is then extended only up to 30 days and not beyond that. Further, I may bring to the notice of this House that in my anxiety to see that replies are received within the due date, I have asked the Government to furnish atleast the in formation that is available with them on the due date, since if the replies are received after the conclusion of the session, it would serve no purpose. In Lok Sabha, sometimes, the very reply given on the floor of the House is that the Government has not been able to collect the information. I have also informed the Government that they could furnish additional information, if any, they collect by the time the question is taken up on the floor of this House. Further, the Hon. Members should know that if the information furnished is incomplete they could put another question and seek further information. In such cases I will allow Hon. Members to put another question.

As regards the point raised by Hon. Member Sri Nanje Gowada that the Speaker cannot misinterpret the rules, I say that the Chair always correctly interprets the rules. It is not fair to say that the Chair misinterprets the rules.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ವಿಷಾದದಿಂದ ಹೇಳಬೇಕಾಗುತ್ತದೆ, ಸಭೆಯ ಸದಸ್ಯರಿಗೂ ಮತ್ತು ತಮಗೂ ಮಧ್ಯೆ ಮಾತಿನ ಚಕಮಕಿ ಯಾವುದೇ ಕಾರಣಕ್ಕೆ ಆಗುವುದು ಅಷ್ಟು ಹಿತಕಾರಿಯಲ್ಲ. ಮಾನ್ಯ ಕೆ. ಎಚ್. ಪಾಟೀಲ್‌ರವರು ನನ್ನ ಮತ್ತು ಸಿದ್ದವೀರಪ್ಪನವರ ಪ್ರಶ್ನೆಗಳನ್ನು ಉದ್ದೇಶಪೂರ್ವಕವಾಗಿ ಉತ್ತರ ಕೊಡವೇ ಬಚ್ಚಿಡುತ್ತಿದ್ದಾರೆ ಅಂತ ಹೇಳಿ ಒಂದು ತೀವ್ರವಾದ ಆಪಾದನೆಯನ್ನು ಸರ್ಕಾರದಮೇಲೆ ಮಾಡಿದ್ದಾರೆ. ಆ ತರಹ ಇದ್ದರೆ ವಿಚಾರ ಮಾಡುತ್ತೇನೆ ಅದಕ್ಕೆ ಅವಕಾಶ ಕೊಡುವುದಿಲ್ಲ ಎಂದು ತಾವು ಹೇಳಬೇಕು.

Mr. SPEAKER.—I agree. But is there anybody to advise the hon. Members to behave properly with the Chair?